# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Project Sixteen Renewable Power Private Limited ಕಂಪನಿಗೆ ಗದಗ ಜಿಲ್ಲೆ, ರೋಣ ಮತ್ತು ಗಜೇಂದ್ರಗಡ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 150 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/08/PSRPPL - 150 MW/Gadag/F-19/2023/0787, ದಿನಾಂಕ: 10.03.2023.

2) ದಿನಾಂಕ:14.03.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡಾವಳಿ.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Project Sixteen Renewable Power Private Limited ಕಂಪನಿಯು ಗದಗ ಜಿಲ್ಲೆಯ ರೋಣ ಮತ್ತು ಗಜೇಂದ್ರಗಡ ತಾಲ್ಲೂಕುಗಳ ಕೊಟಬಾಲ, ಮುಗಲಿ, ಜಿಗಲೂರ, ಇಟಗಿ, ಹೊಸಹಳ್ಳಿ, ನಿಡಗುಂದಿ, ಸೂಡಿ ಮತ್ತು ದ್ಯಾಮಹುನಸಿ ಗ್ರಾಮಗಳಲ್ಲಿ 150 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು Proposed Gadag-II CTU ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 10 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s Project Sixteen Renewable Power Private Limited ಇವರು ಹಂಚಿಕೆಗಾಗಿ ಕೋರಿರುವ ಸ್ಥಳವು ಈ ಹಿಂದೆ M/s Shrirangamani Consultants Private Limited ಕಂಪನಿಗೆ ದಿನಾಂಕ:05.07.2018ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ 5.10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿರುವ ಸ್ಥಳದ ಮೇಲೆ ಬರುತ್ತದೆ. ಮುಂದುವರೆದು, M/s Shrirangamani Consultants Private Limited ಕಂಪನಿಯು ಕಾರಣಾಂತರಗಳಿಂದ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುವ 5.10 ಮೆ.ವ್ಯಾ. ಸಾಮರ್ಥ್ಯದ ಪ್ರಸ್ತಾವನೆಯನ್ನು ಹಿಂಪಡೆದಿರುತ್ತಾರೆ ಹಾಗೂ M/s Vish Wind Infrastrukture LLP ಕಂಪನಿಗೆ ಸರ್ಕಾರಿ ಆದೇಶ ಸಂಖ್ಯೆ:ಇಎನ್ 578 ಎನ್‌ಸಿಇ 2018 ದಿನಾಂಕ:06.10.2020ರನ್ವಯ ಹಂಚಿಕೆಯಾಗಿರುವ 4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳದ ಮೇಲೆ ಬರುತ್ತದೆ.

ದಿನಾಂಕ:25.11.2022ರ ಆದೇಶದಲ್ಲಿ ಪವನ ವಿದ್ಯುತ್ ಯೋಜನೆಗಳಿಗೆ ಹಿಂದಿನ ಎಲ್ಲಾ ರಾಜ್ಯಮಟ್ಟದ ಹಂಚಿಕೆ ಸಮಿತಿಗಳಲ್ಲಿ ಕಡಿಮೆ ಸಾಮರ್ಥ್ಯಕ್ಕೆ ಹೆಚ್ಚು ಪ್ರದೇಶವನ್ನು ನೀಡಿದ್ದು, ಅಂತಹ ಪ್ರಸ್ತಾವನೆಗಳ ಪವನ ವಿದ್ಯುತ್ ಯೋಜನೆಗಳ ಅಭಿವೃದ್ಧಿದಾರರು ಕೋರಿರುವ ಸಾಮರ್ಥ್ಯದ WTG ಗಳಿಗೆ ಜಮೀನಿನ ಪ್ರದೇಶವನ್ನು ಪ್ರತೀ WTG ಗೆ 4 ಎಕರೆಯಂತೆ ಮಿತಿಗೊಳಿಸಿ Demarcation ಮಾಡಲು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ನಿರ್ದೇಶಿಸಲಾಗಿತ್ತು.

ಅದರಂತೆ M/s Vish Wind Infrastrukture LLP ಕಂಪನಿಗೆ 4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ನಿಗದಿಪಡಿಸಿರುವ ಜಮೀನಿನ ಪ್ರದೇಶವನ್ನು Demarcation ಆದೇಶದ ಪ್ರಕಾರ 4 Acres/WTG ಯಂತೆ ಪರಿಗಣಿಸಿ, ಅಳವಡಿಸುವ ವಿಂಡ್ ಟರ್ಬೈನ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು 10 ದಿನಗಳ ಒಳಗಾಗಿ ನೀಡುವಂತೆ, ತಪ್ಪಿದಲ್ಲಿ ಹಂಚಿಕೆ ಆದೇಶದಲ್ಲಿ ನಮೂದಿಸಿರುವ ವಿಂಡ್ ಟರ್ಬೈನ್‌ಗಳಿಗೆ 4 Acres/WTG ಯಂತೆ ಪರಿಗಣಿಸಲಾಗುವುದ ಎಂದು ಕೆ.ಆರ್.ಇ.ಡಿ.ಎಲ್. ನಿಯಮಿತದ ದಿನಾಂಕ:30.01.2023ರ ಪತ್ರದಲ್ಲಿ ತಿಳಿಸಲಾಗಿತ್ತು.

M/s Vish Wind Infrastrukture LLP ಕಂಪನಿಯು ಕೋವಿಡ್ 19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ದೇಶಾದ್ಯಂತ ಲಾಕ್‌ಡೌನ್ ಘೋಷಿಸಿದ ಪ್ರಯುಕ್ತ ಹಂಚಿಕೆಯಾಗಿರುವ ಯೋಜನೆಗಳ ಪ್ರಗತಿಯಲ್ಲಿ ಹಿನ್ನಡೆ ಉಂಟಾಗಿದೆ ಎಂದು ತಿಳಿಸಿ, ಆದಾಗ್ಯೂ ಯೋಜನೆಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಗತಿಯನ್ನು ಸಾಧಿಸಿರುವುದಾಗಿ ತಿಳಿಸಿ, ಸದರಿ ಯೋಜನೆಗಳ ಸ್ಥಳದಲ್ಲಿ ಲಭ್ಯವಿರುವ ಸಾಮರ್ಥ್ಯವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಹಣವನ್ನು ವಿನಿಯೋಗಿಸಿರುವುದರಿಂದ ಹಾಗೂ ಲಭ್ಯವಿರುವ ಸಾಮರ್ಥ್ಯಕ್ಕೆ ಡಿ.ಪಿ.ಆರ್. ಸಲ್ಲಿಸಲು 12-16 ವಾರಗಳ ಕಾಲಾವಕಾಶ ನೀಡುವಂತೆ ದಿನಾಂಕ:09.02.2023ರ ಪತ್ರದಲ್ಲಿ ಕೆ.ಆರ್.ಇ.ಡಿ.ಎಲ್. ನಿಯಮಿತವನ್ನು ಕೋರಿರುತ್ತಾರೆ. ಆದರೆ ಹಂಚಿಕೆಗೆ ಸೀಮಿತವಾಗಿ ಜಮೀನಿನ ಪ್ರದೇಶವನ್ನು Demarcation ಮಾಡಲು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸೂಚಿಸಿರುವುದರಿಂದ, M/s Vish Wind Infrastrukture LLP ಕಂಪನಿಯ ಹಂಚಿಕೆ ಸಾಮರ್ಥ್ಯದ ಪ್ರತಿ ವಿಂಡ್ ಟರ್ಬೈನ್‌ಗೆ (0.8 ಮೆ.ವ್ಯಾ) 5 ಎಕರೆಯಂತೆ ಪರಿಗಣಿಸಿ, 5 WTGಗಳಿಗೆ 25 ಎಕರೆ ಜಮೀನಿನ ಪ್ರದೇಶವನ್ನು ಹೊರತುಪಡಿಸಿ, ಹೆಚ್ಚುವರಿಯಾಗಿ ಉಳಿದ ಪ್ರದೇಶದಲ್ಲಿ M/s Project Sixteen Renewable Power Private Limited ಕಂಪನಿಯ ಪ್ರಸ್ತಾವನೆಯನ್ನು ಕೆ.ಆರ್.ಇ.ಡಿ.ಎಲ್. ನಿಯಮಿತವು ತಿಳಿಸಿರುತ್ತದೆ.

M/s Project Sixteen Renewable Power Private Limited ದಿನಾಂಕ:06.09.2022ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s Ayana Renewable Power Private Limited ಕಂಪನಿಯಿಂದ ಸ್ಥಾಪಿತವಾದ SPV ಸಂಸ್ಥೆ ಆಗಿರುತ್ತದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.03.2022ರ ಅಂತ್ಯಕ್ಕೆ ರೂ.2303.13 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

M/s Project Sixteen Renewable Power Private Limited ಕಂಪನಿಯು ನವೀಕರಿಸಬಹುದಾದ ಇಂಧನ ನೀತಿ 2022-27ರಂತೆ 150 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಅರ್ಜಿಯೊಂದಿಗೆ ಪಾವತಿಸಬೇಕಾಗಿರುವ ಒಟ್ಟು ಸಂಸ್ಕರಣಾ ಶುಲ್ಕದಲ್ಲಿ 30% ಮೊತ್ತವನ್ನು ಪಾವತಿಸಿರುತ್ತಾರೆ. ಬಾಕಿ ಉಳಿದ 70% ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂದಾಯ ಮಾಡಬೇಕಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Project Sixteen Renewable Power Private Limited ಇವರು ಗದಗ ಜಿಲ್ಲೆಯ ರೋಣ ಮತ್ತು ಗಜೇಂದ್ರಗಢ ತಾಲ್ಲೂಕುಗಳ ರೋಣ, ಕೊಟಬಾಲ, ಮುಗಲಿ, ಜಿಗಲೂರ, ಇಟಗಿ, ಹೊಸಹಳ್ಳಿ, ನಿಡಗುಂದಿ, ಸೂಡಿ ಮತ್ತು ದ್ಯಾಮಹುನಸಿ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 150 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು 2.7 ಮೆ.ವ್ಯಾ ಸಾಮರ್ಥ್ಯದ 55 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಅಳವಡಿಸುವ Wind Turbine ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಅಭಿವೃದ್ಧಿದಾರರು ಅಳವಡಿಸುವ ಪ್ರತಿ ಟರ್ಬೈನ್ ನ footprint ಜಾಗಕ್ಕೆ 10 ಎಕರೆಗಳಂತೆ ಒಟ್ಟು 550 ಎಕರೆ (55 Nos of WTG x 10 Acres = 550 Acres) ಜಮೀನನ್ನು ಮಾತ್ರ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಟೋಪೋಶೀಟ್ ಸಂಖ್ಯೆ: 48M/14 ರಲ್ಲಿ